ಶ್ರೀ ಕಲ್ಲಪ್ಪ ನಾಗಪ್ಪ ಗದ್ದಿ :- ರೂಲಿಂಗ್ ಎಮ್.ಎಲ್.ಎ. ಇದ್ದ ಕಾನ್ ಸ್ಟಿಟ್ಯೂಯನ್ಸಿಗೆ ಎಷ್ಟು ಕೊಟ್ಟಿದ್ದೀರಿ, ಅಪೋಸಿಷನ್ ಎಮ್.ಎಲ್.ಎ ಇದ್ದಲ್ಲಿ ಎಷ್ಟು ಕೊಟ್ಟಿದ್ದೀರಿ ತೆಗೆದು ತೋರಿಸಿ ಬಿಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಏತಕ್ಕೆ ಇಷ್ಟು ಹೆಚ್ಚು ಒತ್ತು ಕೊಟ್ಟು ಪ್ರಶ್ನೆ ಕೇಳುತ್ತಿದ್ದೇನೆಂದರೆ, ಇಡೀ ರಾಜ್ಯದಲ್ಲಿ ಪುರಸಭೆ ನಗರಸಭೆಗಳಲ್ಲಿ ಕುಡಿಯುವ ನೀರಿನ ಅಭಾವ ಇರುವಂತಹ ಕಡೆ ತಾವು ಮಂಜೂರು ಮಾಡಿದ್ದೀರಿ. ಕಳೆದ ಎರಡು ವರ್ಷಗಳಿಂದ ಇದು ದಾಖಲೆಗಳಲ್ಲಿ ಬರುತ್ತಿದೆ ಆದರೆ ತಾವು ಏನು ಪುರಸಭೆ ನಗರಸಭೆಯವರು ಮ್ಯಾಚಿಂಗ್ ಗ್ರ್ಯಾಂಟ್ ಕೊಡಬೇಕೆಂದು ಹೇಳಿದಿರಿ ಅದನ್ನು ಯಾರೂ ಕೊಡುವುದಕ್ಕಾಗುತ್ತಿಲ್ಲ. ಹಣಕಾಸಿನ ಪರಿಸ್ಥಿತಿ ಸರಿ ಇಲ್ಲ. ಹಾಗಾಗಿ ನೀವು ಏನಾದರೂ ಸ್ಪೆಷಲ್ ಗ್ರ್ಯಾಂಟ್ ಕೊಟ್ಟು ಆ ಪುರಸಭೆ ನಗರಸಭೆ ಆರ್ಥಿಕವಾಗಿ ತಮ್ಮ ಕಾಲ ಮೇಲೆ ನಿಲ್ಲುವಂತಹ ವ್ಯವಸ್ಥೆ ಮಾಡದೆ ಇದ್ದರೆ ಬಹುಶಃ ಈ ಯೋಜನೆಗಳು ಏನಿದೆ ಡ್ರಿಂಕಿಂಗ್ ವಾಟರ್ ಯೋಜನೆಗಳು ನೀವು ಕೊಟ್ಟಿದ್ದೀರಿ, ಅವರು ಆ ದುಡ್ಡು ಕಟ್ಟುವ ಹಾಗಿಲ್ಲ, ಆ ಸ್ಕೀಮ್ ಮುಂದೆ ಹೋಗುವ ಹಾಗೆ ಇಲ್ಲ. ದಯಮಾಡಿ ಈಗಲಾದರೂ ಕೊನೆಯಪಕ್ಷ ಡ್ರಿಂಕಿಂಗ್ ವಾಟರ್‌ಗೆ ಸಂಬಂಧಪಟ್ಟ ಹಾಗೆ ರಿಲ್ಯಾಕ್ಸ್ ಮಾಡಿ ಆ ಯೋಜನೆಗಳು ಪ್ರಾರಂಭ ಆಗುವುದಕ್ಕೆ ತಾವು ಅವಕಾಶ ಮಾಡಿಕೊಡುತ್ತೀರೋ?

ಶ್ರೀ ಬಿ. ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪ ನವರು ಹೇಳಿರುವುದಕ್ಕೆ, ಯಾರೂ ಕೊಡುತ್ತಿಲ್ಲ, 205 ಯೋಜನೆಗಳಲ್ಲಿ 204 ಯೋಜನೆ ಗಳನ್ನು ನಾವು ಕಾರ್ಯಗತ ಮಾಡಿದ್ದೇವೆ. ಒಂದು ಬಿಟ್ಟು, ನಮ್ಮ ವ್ಯಾಪ್ತಿಗೆ ಬರುವುದು ಕೆ.ಯು.ಡಬ್ಲ್ಯು.ಎಸ್. ಅದರಲ್ಲಿ 10 ಪರ್ಸೆಂಟ್ 15 ಪರ್ಸೆಂಟ್ ಮತ್ತು 20 ಪರ್ಸೆಂಟ್ ವರೆಗೆ ಕೊಡುವವರು ಯಾರೂ ಕೊಟ್ಟಿಲ್ಲ. ಅವೆಲ್ಲಾ ಸಹಾಯಧನವಾಗಿ ಮಾಡಿಕೊಂಡು ಹೋಗುತ್ತಿದ್ದೇವೆ. ಈ ರೀತಿ ಪರಿಸ್ಥಿತಿ ಇದೆ. ಗೊತ್ತಿದೆ. ಅದಕ್ಕೆ ನಾನು ಹೇಳಿದೆ, ಈಗ ಅದು ಸಚಿವ ಸಂಪುಟದ ಮುಂದೆ ಇದೆ, ಯೂನಿಫಾರಂ ಆಗಿ water rate in the State--- ನಮ್ಮ ಇಲಾಖೆಯಲ್ಲಿ 50,000 ಲಕ್ಷದವರೆಗೂ ಜನಸಂಖ್ಯೆ ಆಧಾರದ ಮೇಲೆ ಅವರಿಗೆ ಸಂಪೂರ್ಣ ವಿನಾಯಿತಿ ಕೊಟ್ಟು ಸರ್ಕಾರವೇ ಗ್ರ್ಯಾಂಟ್ ರೂಪದಲ್ಲಿ ಭರಿಸುವಂಥದ್ದು ಇವತ್ತು ನಮ್ಮ ಮುಂದೆ ಇರತಕ್ಕಂತಹ it is a policy decision. It is pending before the Government.

ವಿಷಯ :-ಮೈಸೂರು ನಗರದ ಮಯೂರ ಕಾಂಪ್ಲೆಕ್ಸ್ ಕಾಮಗಾರಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 214 (1141)

ಶ್ರೀ ಎ. ರಾಮದಾಸ್ (ಕೃಷ್ಣರಾಜ) :- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರಪಾಲಿಕೆ ಮತಿಯಿಂದ ನಿರ್ಮಾಣ ಮಾಡಲು ಉದ್ದೇಶಿಸಿರುವ ಮಯೂರ ಕಾಂಪ್ಲೆಕ್ಸ್ ಎಂದು ಪ್ರಾರಂಭವಾಯಿತು. ಎಷ್ಟು ಖರ್ಚಾಗಿದೆ, ಇದರ ಅಂದಾಜು ವೆಚ್ಚವೆಷ್ಟು;

ಅ) ಈಗ ಈ ಕಾಮಗಾರಿಯು ಯಾವ ಹಂತದಲ್ಲಿದೆ, ಈ ಕಾಮಗಾರಿಯನ್ನು ಯಾವ ಕಂಕ್ರಾಕ್ಟರಿಗೆ ನೀಡಲಾಗಿತ್ತು. ಈ ಯೋಜನೆಗೆ ಸಾಲ ಪಡೆಯಲಾಗಿತ್ತೆ, ಎಷ್ಟು ಸಾಲ ಪಡೆಯಲಾಗಿದೆ, ಎಷ್ಟು ವಾರ್ಷಿಕ ಬಡ್ಡಿ ನೀಡಲಾಗುತ್ತಿದೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :-

ಅ) ದಿನಾಂಕ 28-5-1988 ರಂದು ಪ್ರಾರಂಭವಾಯಿತು. 25 ಲಕ್ಷ ರೂ.ಗಳು ಖರ್ಚಾಗಿದೆ. ಇದರ ಅಂದಾಜು ವೆಚ್ಚ ರೂ.275 ಲಕ್ಷಗಳು.

ಆ) ಅಡಿಪಾಯ ಪೂರ್ಣಗೊಂಡಿದ್ದು, ಪಿಲ್ಲರ್‌ಗಳು ಅರ್ಧ ಮಟ್ಟಕ್ಕೆ ಬಂದಿವೆ. ಮೋಡೇಸ್ ಇಂಜಿನಿಯರಿಂಗ್ ಕಂಪನಿರವರಿಗೆ ಗುತ್ತಿಗೆ ನೀಡಲಾಗಿತ್ತು. ರೂ.39.23 ಲಕ್ಷ ಸಾಲ ಪಡೆಯಲಾಗಿದ್ದು, ಸಾಲವನ್ನು ಸಂಪೂರ್ಣವಾಗಿ ಹುಡ್ಕೋಗೆ ಮರುಪಾವತಿ ಮಾಡಲಾಗಿದೆ. ಅದಕ್ಕೆ ಒಟ್ಟು ರೂ.5.71 ಲಕ್ಷ ಬಡ್ಡಿ ಕೊಡಲಾಗಿದೆ.

ಶ್ರೀ ಎ. ರಾಮದಾಸ್ :- ಸನ್ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನೆ ಕೇಳುವುದಕ್ಕೆ ಮುಂಚೆ ಇದಕ್ಕೆ ಪರಿಶೀಲಿಸುತ್ತೇನೆಂದು ಹೇಳುವಂತಹ ಅವಶ್ಯಕತೆ ಇಲ್ಲ. ಏಕೆಂದರೆ ಸರ್ಕಾರದಿಂದ ಹಣ ಕೊಡಬೇಕಾದಂತಹ ಅವಶ್ಯಕತೆ ಇಲ್ಲ. ಪ್ರಮುಖವಾಗಿ ಸುಮಾರು ಎಂಟು ವರ್ಷಗಳ ಹಿಂದೆ ಪ್ರಾರಂಭಮಾಡಿದ ಈ ಕಾಂಪ್ಲೆಕ್ಸ್ ಇವತ್ತಿನವರೆಗೂ ಮುಗಿಯದೆ ಉಳಿಯುವುದಕ್ಕೆ ಕಾರಣ ಏನು? ಜೊತೆಗೆ ಇದು ಯಾವಾಗ ಕಂಪ್ಲೀಟ್ ಆಗುತ್ತದೆ? ಕಂಟ್ರಾಕ್ಟರ್ ಮೋಡೇಸ್‌ನವರಿಗೆ ಕೊಟ್ಟಂತಹ ಮುಂಗಡ ಹಣ ಏನಾಯಿತು? ಜೊತೆಗೆ ಆ ಕಂಟ್ರಾಕ್ಟರ್ ಮೇಲೆ ಇವತ್ತಿನವರೆಗೂ ಕೆಲಸ ಕಂಪ್ಲೀಟ್ ಮಾಡದೆ ಇರುವುದಕ್ಕೆ ಏನು ಕ್ರಮ ಕೈಗೊಳ್ಳಲಾಗಿದೆ, ಜೊತೆಗೆ ಪ್ರತಿ ತಿಂಗಳು ಟ್ಯಾಕ್ಸ್ ಪೇಯರ್ಸ್ ಹಣವನ್ನು ಪ್ರತಿ ತಿಂಗಳು ಐದು ಲಕ್ಷ ರೂಪಾಯಿ ಬಡ್ಡಿಯನ್ನು ಕೊಡುತ್ತಿರುವಂಥದ್ದು ಎಷ್ಟು ಸಮಂಜಸವಾದ ವಿಚಾರ ಎಂದು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :- ಸನ್ಮಾನ್ಯ ಅಧ್ಯಕ್ಷರೇ, ಮೋಡೇಸ್ ಬ್ರೀವರಿ ಏಜೆನ್ಸಿಗೆ ನಾವು ಕೆಲಸ ಕೊಟ್ಟಿದ್ದೇವೆ, ಆ ಮೇಲೆ ಇನ್ ಟೈಮ್ ಅವರು ಕೆಲಸ ಮಾಡದೆ ಇದ್ದ ಕಾರಣ ಅಗ್ರೀಮೆಂಟ್ ಟೆಂಡರ್ ಏನಿತ್ತು, ಅದು ಕ್ಯಾನ್ಸಲ್ ಮಾಡಿ, ಕಾರ್ಪೊರೇಷನ್‌ನವರಿಗೆ ಬೇರೆಯವರಿಗೆ ಕೆಲಸ ಕೊಟ್ಟಿದ್ದ ಕಾರಣದಿಂದ ಸ್ವಲ್ಪ ತಡವಾಗಿದೆ.

ಶ್ರೀ ಎ. ರಾಮ್‌ದಾಸ್ :- ಎಂಟು ವರ್ಷಗಳ ಕಾಲ ಜನತಾ ಪಕ್ಷದ ಸರ್ಕಾರ ಇದ್ದಾಗ ಇದಕ್ಕೆ ಅಡಿಗಲ್ಲು ಇಟ್ಟರು. ಅದಕ್ಕೆ ಆಗಲೇ ಅವರಿಗೆ ಮುಂಗಡ ಹಣ ಕೊಟ್ಟರೆ ಹುಡ್ಕೋದಿಂದ ಸಾಲ ತೆಗೆದುಕೊಂಡು ಬಂದಿರಿ, ಆದರೆ, ಎಂಟು ವರ್ಷಗಳ ಕಾಲದಿಂದ ಕೆಲಸ ಕಂಪ್ಲೀಟ್ ಆಗದೆ ಉಳಿಯುವುದಕ್ಕೆ ಪ್ರಮುಖವಾದ ಕಾರಣ ಏನು? ಇವತ್ತಿನವರೆಗೆ ಮುಂಗಡ ಕೊಟ್ಟಿದ್ದ ಹಣ ಠೇವರಿ ಮಾಡುವುದಕ್ಕೆ

ಏನು ಕ್ರಮ ಕೈಗೊಂಡಿದ್ದೀರಿ? ಇದನ್ನು ಯಾವಾಗ ನೀವು ಕಂಪ್ಲೀಟ್ ಮಾಡುತ್ತೀರಿ? ಜೊತೆಗೆ ಟ್ಯಾಕ್ಸ್ ಪೇಯರ್ ಹಣವನ್ನು ಪ್ರತಿ ತಿಂಗಳಲ್ಲೂ ಐದು ಲಕ್ಷ ರೂಪಾಯಿ ಬಡ್ಡಿಯನ್ನು ಕೊಡುವಂಥದಕ್ಕೆ ಏನು ಮುಖ್ಯ ಕಾರಣ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :- ಮಾನ್ಯ ಅಧ್ಯಕ್ಷರೇ, ಆ ದುಡ್ಡು ರಿಕವರಿ ಮಾಡುವ ಸಲುವಾಗಿ ಅಲ್ಲಿನ ಕಾರ್ಪೊರೇಷನ್ ಒಂದು ರೆಸಲ್ಯೂಷನ್ ಪಾಸ್ ಮಾಡಿ ಕೊಟ್ಟಿದ್ದಾರೆ, ಅವರ ಮೇಲೆ ಲೀಗಲ್ ಆಕ್ಷನ್ ತೆಗೆದುಕೊಳ್ಳಬೇಕೆಂದು ಅವರಿಗೆ ನೋಟಿಸ್ ಕೊಟ್ಟಿದ್ದಾರೆ. ಬೇರೆ ಏನಿದೆ ಎಂದರೆ, ಬೇರೆ ವಿಜಿನ್ಸಿಗೆ ಬಡ್ಜೆಟೆಡ್ ಅಲಾಟೆಡ್ ಅಮೌಂಟ್ ಏನಿತ್ತು ಆ ಪ್ರಕಾರ ಕೆಲಸ ನಡೆಯುತ್ತಿದೆ.

ಶ್ರೀ ಎ. ರಾಮದಾಸ್ :- ಕೆಲಸ ನಡೆಯುತ್ತಿಲ್ಲ, ಇವತ್ತು ಅಲ್ಲಿ ಹಳ್ಳ ಆಗಿ ಎಂಟು ವರ್ಷಗಳ ಕಾಲದಿಂದ ಮೂರು ಕೊಲೆಗಳು ಆಗುವಂತಹ ಒಂದು ಜಾಗ ಆಗಿದೆ ಈಗಾಗಲೇ ಫೌಂಡೇಷನ್ ಕೆಲಸ ಮುಗಿದಿದೆ ಎಂದು ಉತ್ತರ ಕೊಟ್ಟಿದ್ದೀರಿ. ಆದರೆ ಆ ಹಳ್ಳ ಬಿಟ್ಟು ಬೇರೆ ಇನ್ನು ಏನೂ ಇಲ್ಲ. ಹಣ ಖರ್ಚಾಗಿದೆ ಎಂದು ಹೇಳಿದ್ದೀರಿ. ಎಲ್ಲಿ ಖರ್ಚಾಗಿದೆಯೆಂದು ದಯಮಾಡಿ ಇದು ತನಿಖೆ ಮುಖಾಂತರ ಗೊತ್ತಾಗಬೇಕಾಗಿದೆ ಹೊರತು ಬೇರೆ ಇನ್ನು ಏನೂ ಅಲ್ಲ. ಆದರೆ ಸಚಿವರು ಯಾವ ರೀತಿಯಾಗಿ ಉತ್ತರವನ್ನು ಇಲ್ಲಿ ಕೊಟ್ಟರು ಎಂದು ಆಶ್ಚರ್ಯವಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು :- ಬರೀ ಪಿಲ್ಲರ್ಸ್ ಮಾತ್ರ ನಿಂತಿದೆ. ಏನೂ ಅಲ್ಲಿ ಇಲ್ಲ ಪ್ರತಿ ತಿಂಗಳು 60 ಲಕ್ಷ ರೂಪಾಯಿ ಸಂಬಳ ಕೊಡಬೇಕು. ತೆರಿಗೆ ಹಣ ಹೀಗೆ ಮಿಸ್‌ಯೂಸ್ ಆದರೆ.....

ಅಧ್ಯಕ್ಷರು :- ಉತ್ತರ ಸರಿಯಾಗಿಲ್ಲ ಎಂದು ಹೇಳುತ್ತಿದ್ದಾರೆ. ನೋಡಿ ಅವರು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದಾರೆ, ಅಲ್ಲಿ ಏನೂ ಕೆಲಸ ನಡೆಯುತ್ತಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಆಫೀಸರ್ಸ್ ಸರಿಯಾಗಿ ಇನ್‌ಫಾರ್ಮೇಷನ್ ಕೊಟ್ಟಿದ್ದಾರೋ ಅಥವಾ ಇಲ್ಲ ಎಂದು etc. ಎಂದು ನೋಡಿ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :- ಸ್ವಲ್ಪ ನೋಡಿ ಅನ್ಸ್ವರ್ ಹೇಳುತ್ತೇನೆ.

Mr. SPEAKER :- I will ask him to come with proper answers.... **ಈ ಪ್ರಶ್ನೆಯನ್ನು ತಡೆಹಿಡಿಯುತ್ತೇನೆ, ಸ್ಪಷ್ಟವಾಗಿ ಎಲ್ಲಾ ಉತ್ತರ ತೆಗೆದು ಕೊಂಡು ಬಂದು ಹೇಳಿ.** The Question is held over. Mr. Patil please come back with proper answer for the next week.

(ಪ್ರಶ್ನೆಯನ್ನು ತಡೆಹಿಡಿಯಲಾಯಿತು.)